CW.7 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.841/2009

| | |
|---|---|
| ಸಾಕ್ಷಿದಾರರ ಹೆಸರು | ವೆಂಕಟೇಶ್ ಎನ್ |
| ತಂದೆಯ ಹೆಸರು | ಲೇಟ್ ನಾರಾಯಣ್ |
| ವಯಸ್ಸು | 52 ವರ್ಷ |
| ವೃತ್ತಿ | ಎ ಎಸ್ ಐ, ಎಂ ಕೆ ದೊಡ್ಡಿ ಠಾಣೆ |
| ವಿಳಾಸ | ಎಂ ಕೆ ದೊಡ್ಡಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 17.02.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 2005 ರಿಂದ 2011 ರವರೆಗೂ ನಾನು ಕೋಡಿಹಳ್ಳಿ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ಆರೋಪಿಯನ್ನು ನೋಡಿರುತ್ತೇನೆ. ಈ ದಿನ ಆರೋಪಿ ಗೈರು ಹಾಜರಿದ್ದು ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಚಾಸಾ-1 ರಿಂದ 6 ಮತ್ತು 8 ರವರ ಪರಿಚಯವಿದೆ.

ದಿಃ 01.01.2009 ರಂದು ಹೊಸವರ್ಷ ಇದ್ದ ಪ್ರಯುಕ್ತ ನಮ್ಮ ಠಾಣಾ ಪಿ ಎಸ್ ಐ ರವರಾದ ಚಾಸಾ-1 ರವರು ನನ್ನನ್ನು ಹಾಗೂ ಚಾಸಾ-8 ರವರನ್ನು ಮತ್ತು ಚಾಸಾ-6 ರವರನ್ನು ನಮ್ಮ ಠಾಣಾ ಜೀಪಿನಲ್ಲಿ ನಮ್ಮ ಠಾಣಾ ಸರಹದ್ದಿನಲ್ಲಿ ಗಸ್ತು ಮಾಡಲು ಕರೆದುಕೊಂಡು ಹೋಗಿದ್ದು ಅದರಂತೆ ರಾತ್ರಿ 8 ಗಂಟೆ ಸಮಯದಲ್ಲಿ ಹೊಸದುರ್ಗ ಗ್ರಾಮದ ಬಳಿ ನಾವುಗಳು ನಿಂತಿದ್ದಾಗ ಹುಣಸನಹಳ್ಳಿ ಕಡೆಯಿಂದ

ಒಂದು ಲಾರಿ ಬರುತ್ತಿದ್ದು ನಮಗೆ ಅನುಮಾನ ಬಂದು ಅದನ್ನು ತಡೆದು ನಿಲ್ಲಿಸಿದಾಗ ನಂತರ ಪರಿಶೀಲನೆ ಮಾಡಿ ನೋಡಲಾಗಿ 8 ಕೊರೆ ಅಕ್ಕಿ ಮೂಟೆಗಳು ಕಂಡು ಬಂದಿರುತ್ತದೆ. ಈ ಬಗ್ಗೆ ಸದರಿ ಚಾಲಕನನ್ನು ಬಿಲ್ಲು ಹಾಗೂ ಪರವಾನಿಗೆ ಇರುವ ಬಗ್ಗೆ ವಿಚಾರಣೆ ಮಾಡಿದಾಗ ಆತನು ಯಾವುದೇ ಬಿಲ್ಲು ಅಥವಾ ಪವಾನಿಗೆಯನ್ನು ಹಾಜರು ಪಡಿಸಿರುವುದಿಲ್ಲ. ನಂತರ ಸದರಿ ಲಾರಿಯ ನಂಬರ್ ನೋಡಲಾಗಿ ಅದು ಕೆಎ-11-ಬಿ-2349 ಎಂದು ಸಂಖ್ಯೆ ಇದ್ದು ಸದರಿ ಚಾಲಕನ ಹೆಸರು ಸಮೀ ಬಿನ್ ಖಾಸಿಂ ಖಾನ್ ಎಂದು ಹಲಗೂರಿನವರು ಎಂದು ತಿಳಿದು ಬಂದಿರುತ್ತದೆ.

ಆತ ಸದರಿ ದಾಸ್ತಾನನ್ನು ಹುಣಸನಹಳ್ಳಿಯಿಂದ ಹಲಗೂರಿಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ. ನಂತರ ಚಾಸಾ-1 ರವರು ಸದರಿ ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ನಂತರ ಸದರಿ ವಸ್ತುಗಳನ್ನು ಅಮಾನತು ಪಡಿಸಿಕೊಂಡು ಆರೋಪಿಗಳನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಹೋಗಿ ಠಾಣಾ ಮೊಕದ್ದಮೆ ಸಂಖ್ಯೆ 1/2009 ಎಂದು ಪ್ರ.ವವ ದಾಖಲಿಸಿರುತ್ತಾರೆ. ನಾನು ಈ ಸಂಬಂಧ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಸದರಿ ದಿನ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 9 ಗಂಟೆಯವರೆಗೂ ಕರ್ತವ್ಯದಲ್ಲಿದ್ದೇನು. ಸಾಮಾನ್ಯವಾಗಿ ನಮ್ಮಗಳನ್ನು ಗಸ್ತಿಗೆ ಹಾಕುವ ಸಂದರ್ಭದಲ್ಲಿ ನಮ್ಮ ಠಾಣೆಯ ರೋಲ್ ಕಾಲ್ ರಿಜಿಸ್ಟರ್ ನಲ್ಲಿ ನಮೂದು ಮಾಡಲಾಗುತ್ತದೆಂದರೆ ಸರಿ. ನಾನು ಆ ದಿನ ಸದರಿ ಕರ್ತವ್ಯದಲ್ಲಿದ್ದ ಬಗ್ಗೆ ಸದರಿ ರೋಲ್ ಕಾಲ್ ರಿಜಿಸ್ಟರ್ ನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ. ಸದರಿ ದಿನ ನಾನು ಹೇಳಿರುವ ರೀತಿಯಲ್ಲಿ ನಾನು ಚಾಸಾ-1, 6 ಹಾಗೂ ಚಾಸಾ-8 ರವರು ಯಾವುದೇ ಗಸ್ತಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಲ್ಲಿ ಸದರಿ ಜಾಗದಲ್ಲಿ ಹುಣಸನಹಳ್ಳಿ ಕಡೆಯಿಂದ ಯಾವುದೇ ಲಾರಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಯಾವುದೇ ಲಾರಿ 8 ಕೊರೆ ಅಕ್ಕಿ ಮೂಟೆಗಳನ್ನು ಹಾಕಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ನಮ್ಮ ಠಾಣೆಯ ಅಂಕಿಅಂಶದ ಸಲುವಾಗಿ ಆರೋಪಿ ಯಾವುದೇ ತಪ್ಪು

ಮಾಡದೇ ಇದ್ದರೂಸ ಹಿತ ಮೇಲಾಧಿಕಾರಿಗಳಮಾತನ್ನು ಕೇಳಿಸ ುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಸದರಿ ದಿನ ಪಂಚರ ಸಮಕ್ಷಮ ಯಾವುದೇ ಮಹಜರ್ ಮಾಡಿ ಅಕ್ಕಿ ಮೂಟೆಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈ ಸಂಬಂಧ ಯಾವುದೇ ಹೇಳಿಕೆ ಕೊಡದೇ ಇದ್ದರೂ ಸಹಿತ ಅದನ್ನು ಬನಾವಟ್ ಮಾಡಿ ಹಾಜರು ಪಡಿಸಲಾಗಿರುತ್ತದೆಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**